Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅಂಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

2—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಭಾರತದ ಧರ್ಮ ಇಹಪರ ಸಾಧಕವಾದುದು – ರುಪ್ರಪಟ್ಟಣದಲ್ಲಿ ಜತ್ತಿಯವರ ಹೇಳಿಕೆ

ಶ್ರೀ ಜಗದ್ಗುರುಗಳ ನುಡಿ – ರಾಜಕೀಯಕ್ಕೆ ಮಂತ್ರಿ ಮರಿಯಪ್ಪನವರು ಕೆಮುಗಿದರು

ಕಳೆದ 12 ದಿನಗಳಿಂದಲೂ ನಡೆಯುತ್ತಿದ್ದ ಅತಿರುದ್ರ ಮಹಾಯಾಗದ ಪೂರ್ಣಾಹುತಿಯು ಮೊನ್ನೆ ರುದ್ರಪಟ್ಟಣದಲ್ಲಿ ವಿಧಿವತ್ತಾಗಿ ನೆರವೇರಿತು. ಈ ಕೊನೆಯ ದಿನದ ಯಾಗವನ್ನು ಸುಮಾರು 50 ಸಾವಿರಕ್ಕಿಂತಲೂ ಹೆಚ್ಚು ಜನರು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ಮಾತನಾಡುತ್ತಾ, ಶೃಂಗೇರಿಯ ಶ್ರೀ ಶ್ರೀ ಜಗದ್ಗುರುಗಳು ತಮ್ಮ ತಪೋನಷ್ಠಾನಗಳಿಂದ ಲೋಕಕ್ಷೇಮವನ್ನು ನಿರಂತರವೂ ಹಾರೈಸುತ್ತಿರುವರಲ್ಲದೆ ಇಂಥಹ ಪವಿತ್ರ ಮಹೋತ್ಸವಗಳಲ್ಲಿ ಭಾಗವಹಿಸಿ ಜನರಿಗೆ ಭಗವತ್ಕೈಂಕರ್ಯವನ್ನು ಒದಗಿಸಿಕೊಡುತ್ತಿರುವುದು ನಾಡಿನ ಪುಣ್ಯ ರಾಷ್ಟ್ರ ರಾಷ್ಟ್ರಗಳಲ್ಲಿನ ಅಂತಃಕಲಹ, ಹೋರಾಟ, ಈರ್ಷೆ, ದ್ವೇಷ, ಕೋಪತಾಪಗಳು ಒಂದೆಡೆ ಮಾನವ ಜನಾಂಗದಲ್ಲಿ ತಾಂಡವವಾಡುತ್ತಿವೆ ಜಗತ್ತು ಶಿಲ್ಲಣಿಸುತ್ತಿದೆ. ವಿಜ್ಞಾನ ಪ್ರಗತಿ ಹೊಂದುತ್ತಿದೆ. ಮಾನವನ ಬುದ್ಧಿ ಸೃಷ್ಟಿಯ ಫಲವಾಗಿ ಲೋಕಾಂತರ ಸಂಚಾರವೂ ಸಮೀಪವಾಗುತ್ತಿದೆ. ಆದರೆ ಪ್ರಕೃತಿ ಶಕ್ತಿಗಳನ್ನು ವಿಜ್ಞಾನ ಸಾಧಿಸಲಾಗಿಲ್ಲ ದಕ್ಕೆ ಇಂದಿನ ವಿಪ್ಲವ ಸಾಕ್ಷಿ ಎಂದು ನುಡಿದರು.

ಭಾರತೀಯ ಮಹರ್ಷಿಗಳು ವಿಜ್ಞಾನವನ್ನು ಸುಜ್ಞಾನದಿಂದಲೇ ಅರಿವ ಶಕ್ತಿ ಪಡೆದಿದ್ದರು. ಉಪನಿಷತ್ತಿನಲ್ಲಿ ಬರುವ ಋಷಿವೊಂದನ್ನು ತಿಳಿದರೆ ಸರ್ವಸ್ವವೂ ತಿಳಿಯುವುದೋ ಇಂಥಹ ವಸ್ತುವನ್ನು ತಿಳಿಯಲು ಶಕ್ತಿಸುತ್ತಿದ್ದರು. ಭಾರತ ಧರ್ಮವು ಮಾನವನ ಇಹಪರ ಸಾಧಕವೆಂದು ಅನ್ಯರಾಷ್ಟ್ರಸಂಚಾರಿಗಳಾದ ವೈದಿಕರು ಅಭಿಪ್ರಾಯ ಶುದ್ಧಹೃದಯದಿಂದ ಉಚ್ಚರಿಸಿದ ಮಂತ್ರಗಳು ವಿಶ್ವಕ್ಷೇಮವನ್ನುಂಟು ಮಾಡುವುದೆಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ ಎಂದರು.

ಒಂದು ಘಟ್ಟಕ್ಕೆ ಮುಟ್ಟಿದ ಗೋವಾ ಪ್ರಶ್ನೆಯೊಂದು ಮಾತ್ರದಿಂದ ನಾವು ಶೂನ್ಯರಾಗುವುದಿಲ್ಲ. ಇದರ ಹಲವು ರಾಷ್ಟ್ರಗಳಲ್ಲಿದ್ದ ಸುಪ್ತ ಅಸುರೀ ಶಕ್ತಿಗಳು ಹೆಡೆಯಾಡಿಸತೊಡಗಿವೆ. ಚೀನಾ ಮತ್ತು ಪಾಕಿಸ್ತಾನದ ಪ್ರಶ್ನೆಗಳು ಸಮಸ್ಯೆಯಾಗಿ ನಮ್ಮ ಮುಂದೆ ನಿಂತಿವೆ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ವಿಷಯದಲ್ಲಿ ಎಲ್ಲ ಅಲ್ಪ ವಿಷಯಗಳನ್ನು ದವನವಾಡಿ ಐಕಮತ್ಯದಿಂದ ಕರ್ತವ್ಯನಿಷ್ಠರಾಗಬೇಕೆಂದು ನುಡಿದರು.

ಯಾಗಾಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಜಗದ್ಗುರುಗಳವರು ಮಾತನಾಡಿ ಶ್ರೀ ಜತ್ತಿಯವರ ಗುಣಗಾನವನ್ನು ಮಾಡಿ ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ಯಾಗಕ್ಕೆ ಮಾಡಿರುವ ಅನೇಕ ರೀತಿಯ ಸಹಾಯವನ್ನು ಪ್ರಶಂಸಿಸಿದರು.

ಂಂ

ತಲೆಯ ಮೂಗಾಟ

ಲಂಡನ್— 65 ವರ್ಷದ ಒಬ್ಬ ಮಾಜಿ ವಸ್ತ್ರಾದಿ ಮತ್ತು ವ್ಯಾಪಾರಸ್ಥನು ಒಂದು ಅಂಗಡಿ ಇಡುವುದಕ್ಕೆ ಹಣಬೇಕಾಗಿದ್ದು, ತರಹ ತರಹ ಹಸುರು ಹುಯ್ಸಿರುವ ತನ್ನ ತಲೆಯನ್ನು ಮಾರಿದ್ದಾನೆ: ಹಸುರು ಹುಯ್ಸಿರುವದಕ್ಕೆ 100 ಪೌಂಡು ಅಂದಾಜು ಹಾಕಿದ್ದಾನೆ.

ಅಸ್ಸಾಂನ ತೈಲಾಗಾರ ಸಾರ್ವಜನಿಕ ಕ್ಷೇತ್ರದ ರುವೇನಿಯಾ ಪರಣಿತರ ಸಹಾಯದಿಂದ ರೂ. 18 ಕೋಟಿ ವೆಚ್ಚದಲ್ಲಿ ಅದರ ನಿರ್ಮಾಣವಾಗಿದೆ. ಇದು ಒಂದು ಹೊಸ ಅಧ್ಯಾಯ ಎಂದು ಅದರ ಕಾರ್ಯಾರಂಭ ನೆರವೇರಿಸಿದ ಪಂ|| ನೆಹರು ನುಡಿದರು.

ರಾಜ್ಯದ ಪ್ರಣಾಸಿನವಂತ್ರಿ ಶ್ರೀ ಟಿ ಮರಿಯಪ್ಪನವರು ರಾಜಕೀಯಕ್ಕೆ ಕೈಮುಗಿದು ಇನ್ನು ಮುಂದೆ ಇಂಥಹ ಪುಣ್ಯ ಕೆಲಸಗಳಲ್ಲಿ ಭಾಗಿಯಾಗುವುದಾಗಿ ತಿಳಿಸಿದ್ದಾರೆ ಎಂದು ಶ್ರೀ ಶೃಂಗೇರಿ ಜಗದ್ಗುರುಗಳವರು ಮೊನ್ನೆ ರುದ್ರಪಟ್ಟಣದಲ್ಲಿ ಹೇಳಿದರು

ಂಂ

ನೆಹರುರಿಗೆ ಜೋತಿಷ್ಯದಲ್ಲಿ ನಂಬಿಕೆಯಿಲ್ಲ

ವಾರಣಾಸಿ— ಪಂ|| ನೆಹರೂರವರು ತಮಗೆ ಜ್ಯೋತಿಷ್ಯದಲ್ಲಿ ನಂಬಿಕೆಯಿಲ್ಲವೆಂದೂ ಫೆಬರವರಿಯಲ್ಲಿ ಅಷ್ಟಗ್ರಹ ಕೂಟದಿಂದ ದುಷ್ಟ ಪರಿಣಾಮಗಳಾಗವುವೆಂದು ಹೇಳಲಾಗುತ್ತಿರುವ ಬಗ್ಗೆ ತಮಗೇನೂ ಚಿಂತೆ ಹತ್ತಿಲ್ಲವೆಂದೂ ತಿಳಿಸಿರುವರು

ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ

ಮೈಸೂರು ಮಹಾರಾಜಾ ಕಾಲೇಜಿನ ಯೂನಿಯನ್ ಭವನದಲ್ಲಿ 'ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ' ಎಂಬ ಪ್ರದರ್ಶನ ನಡೆಯುತ್ತಿದೆ: ಅದರಲ್ಲಿ ಚಿತ್ರಮಾಲೆಗಳ ಮೂಲಕ ಅಮೇರಿಕಾದ ಪೌಢಶಿಕ್ಷಣದಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ಕರಿಸಲಾಗಿದೆ. ಸಾರ್ವಜನಿಕರಿಗೆ ನಿರೂಪಣೆ ಲಭಿಸುತ್ತದೆ.

3 ನೇ ಯೋಜನೆಯಲ್ಲಿ

6 ರಿಂದ 11 ವರ್ಷಗಳ ವರಿಗೆ ಶಾಲೆಗೆ ಮಕ್ಕಳು ಹೋಗುವುದಕ್ಕೆ ಚಹೆಚ್ಚು ಪ್ರಧಾನತೆ ಕೊಡಲಾಗುವುದು.

ಸಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಮ್ಷ ಜೋಯಿಸರಿಂದ
3 ಬುಧವಾರ ದ್ವಾದಶಿ ಅನೂರಾಧ

ಹೊಸ ವರ್ಷದ ಶುಭಾಶಯಗಳು

ಭಗವಂತನು ಸರ್ವರಿಗೂ ಸಕಲ ಸನ್ಮಂಗಳವನ್ನುಂಟು ಮಾಡಲಿ.

— ಸತ್ಯವಾದಿ

ಕೆಲವರಿಗೆ ಗಾಯ

ಹಂಪಾಪುರಕ್ಕೆ ಸುಮಾರು 3 ಮೈಲಿಗಳ ದೂರವಿರುವ ಬಾಲೂರಿನಲ್ಲಿ ವೇಟೆ ಮಂದನ್ನು ಕತ್ತರಿಸಿದ ಸಂದರ್ಭದಲ್ಲಿ ಮೊನ್ನೆ ಎರಡು ಗುಂಪುಗಳಲ್ಲಿ ಹೊಡೆದಾಟವಾಗಿ ಕೆಲವರಿಗೆ ಗಾಯವಾಗಿದೆ ಎಂದು ವರದಿಯಾಗಿದೆ

ಭಾಷಣ

ಮೈಸೂರು ರಾಜ್ಯದ ಅಬ್ಕಾರಿ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮೈಸೂರು ಕೇಂದ್ರ ಆಹಾರ ಸಂಶೋಧನಾಲಯದ ಸಿಬ್ಬಂದಿಯನ್ನು ಉದ್ದೇಶಿಸಿ ಈ ದಿನ ಮಧ್ಯಾಹ್ನ 4-15 ಗಂಟೆಗೆ ಭಾಷಣ ಮಾಡುವರು. ಸಂಶೋಧನಾಲಯದ ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸುವರು.

12 ನೆ ಸಾರಿ ರಕ್ತದಾನ

ಮದರಾಸು— ಪೆಲ್ಲಕುಂ ಗೋಪಾಲಕೃಷ್ಣ ಎಂಬ ಚಲಚಿತ್ರ ವ್ಯವಹಾರಕನು ಮದರಾಸು ಜನರಲ್ ಆಸ್ಪತ್ರೆಯ ಬ್ಲಡ್ ಬ್ಯಾಂಕಿಗೆ 12 ನೇ ಸಾರಿ ರಕ್ತ ದಾನ ಮಾಡಿದರು

ಚಂದಾದಾರರಲ್ಲಿ ವಿನಂತಿ

ರಶೀತಿಯನ್ನು ಸ್ವೀಕರಿಸಿ ಚಂದಾ ಪಾವತಿ ಮಾಡಬೇಕೆಂದು ಕೋರಿದೆ

— ಮ್ಯಾನೇಜರ್ 'ಸತ್ಯವಾದಿ'

ಗಂಡಸು ಹೆಂಗಸಾದ

ಪಾಟಿಯಾಲಾ— ದೇಶದಲ್ಲಿ ಹಾಕಿ ಆಟದಲ್ಲಿ ಪ್ರಸಿದ್ಧನಾಗಿರುವ ಒಬ್ಬ ಪುರುಷನನ್ನ ಅಂಡವಾಯು ಚಿಕಿತ್ಸೆಗಾಗಿ ಪರೀಕ್ಷಿಸಿದ ಡಾಕ್ಟರರು, ಅವನ ಲಿಂಗ ಪರಿವರ್ತಿತವಾಗುತ್ತಿದ್ದು ಅವನು ಸ್ತ್ರೀಯಾಗುತ್ತಿರುವುದನ್ನು ಕಂಡು ಆಶ್ಚರ್ಯಗೊಂಡಿರುವರು

ಫ್ರಾನ್ಸಿನ ಸುಂದರಿ

ಲೆಹವ್ರೆಯಲ್ಲಿನ ಟ್ಯೂಹಾಲಿನಲ್ಲಿ ಮಿಸ್ ಮಾನಿಕ್ ಲೆಮೋಂ ಎಂಬ ಯುವತಿ 'ಫ್ರಾನ್ಸಿನ ಸುಂದರಿ' ಯಾಗಿ ಚುನಾಯಿಸಲ್ಪಟ್ಟಳು

ಮುಷ್ಕರಗಾರರಿಂದ ಬಂಧನ

ಕಲ್ಲಿಕೋಟೆ— ಐದು ದಿನಗಳಿಂದ ಮುಷ್ಕರ ನಡೆಸುತ್ತಿರುವ ಕೈಗಾರಿಕೆಯವರು ಸರಕಾರಿ ಆಜ್ಞೆ ಉಲ್ಲಂಘಿಸಿದ ಅಪಾದನೆಗಾಗಿ ದಸ್ತಗಿರಿ ಮಾಡಲ್ಪಟ್ಟು ತಾ| 13 ರವರಿಗೆ ಜೈಲು ಕಸ್ಟಡಿಗೆ ಕಳುಹಿಸಲಾಯಿತು.

ಅಗ್ನಿ ಅನಾಹುತ

ವಿಶಾಖಪಟ್ಟಣ ಜಿಲ್ಲಾ ವೆಂಟಾಡಾ ಗ್ರಾಮದಲ್ಲಿ 525 ಮೊಟ್ಟೇ ಜೋಪಡಿಗಳು ಸುಟ್ಟು ಬೂದಿಯಾದವು : ಭತ್ತದ ದಾಸ್ತಾನುಗಳೂ, ಬಟ್ಟೆಬರೆಗಳೂ, ಹಣದ ನೋಟುಗಳೂ ಸುಟ್ಟುಹೋದವು.

ಸೋಷಲಿಸ್ಟ್ ಪಾರ್ಟಿಯ ಚುನಾವಣಾ ಪ್ರಣಾಳಿಕೆ

ಹೈದರಾಬಾದು— ಕಾಂಗ್ರೆಸ್ಸು ಆಡಳಿತದಿಂದ ಜನವು ಕಷ್ಟದಲ್ಲಿದ್ದಾರೆಂದೂ, ಐಕ್ಯತೆ ತಪ್ಪಿರುವದೆಂದೂ, ಅವರ ಅಧಿಕಾರ ತಪ್ಪಿದ್ದಲ್ಲದ ಜನತೆಗೆ ಸುಖವಿಲ್ಲವೆಂದೂ ಸೋಷಲಿಸ್ಟ್ ಪಾರ್ಟಿ ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಿದೆ : ಜಾತಿಗಳು ಹೋಗಬೇಕೆಂದೂ, ದೊಡ್ಡ ವನುಷ್ಯ – ಚಿಕ್ಕ ವನುಷ್ಯ ಎಂಬ ಅಂತರ ತಪ್ಪಬೇಕೆಂದೂ ತಿಳಿಸಲಾಗಿದೆ ; ಜಾತಿ ಕೋಮನ್ನು ತೊಡೆದುಹಾಕಲು ಪಾರ್ಟಿಯು ಸಹಪಂಕ್ತಿ ಭೋಜನದಿಂದ ಪ್ರಾರಂಭಿಸಿ ಅಂತರಜಾತಿ ವಿವಾಹಗಳವರೆಗೂ ಕಾರ್ಯ ನಡೆಸುವುದೆಂದೂ ತಿಳಿಸಲಾಗಿದೆ.

ರಾಜಾಘಾಟಿನಲ್ಲಿ ಪ್ರಾರ್ಥನೆ

ನವದೆಹಲಿ— ಗೋವಾ ವಿಮೋಚನೆ ಡಾರ್ಮ್, ತಾಯಿ ನಾಡಿಗೆ ಸೇರಿದ್ದಕ್ಕಾಗಿ, ರಾಜಾಘಾಟಿನಲ್ಲಿ ಮೌನ್ನೆ ಸಾಮೂಹಿಕ ಪ್ರಾರ್ಥನೆ ನಡೆಯಿಸಲಾಯಿತು.

o o

ಕ್ರಿಸ್ಮಸ್ ಕಾರ್ಡುಗಳು

ಬ್ರಿಟನ್ನಿನಲ್ಲಿ ಈ ಸಾರಿ ಸುಮಾರು 612೦೦೦೦೦ ಕ್ರಿಸ್ಮಸ್ಸು ಕಾರ್ಡುಗಳು ಮೋಸ್ಟ್ ನಾಡಲಾಗಿವೆ — ಕಾಮನ್ಸು ಸಭೆಯು ತನ್ನ ಸದಸ್ಯರಿಗಾಗಿ 12೦೦೦೦ ಕಾರ್ಡುಗಳನ್ನು ಮುದ್ರಿಸಿದೆ — ಸ್ಟಾಕ್ ಎಕ್ಸ್‌ಚೇಂಜು ಕಾನ್ಸಿಲ್ಲು, ರಾಲ್ಸ್ ರಾಯ್ಸ್ ಡೆಫ್ಟ್ರೀಚೇರ್ಟ್ ಎಷ್ಟೋ ಕಾರ್ಡುಗಳನ್ನು ಹೊರಡಿಸುತ್ತಿರುವರು — ಹೀಗಾಗಿ ಕ್ರಿಸ್ಮಸ್ಸು ಕಾರ್ಡುಗಳ ಸಂಬಂಧದ ಖರ್ಚುಗಳು 26೧೦೦೦೦೦ ರೂಗಳಷ್ಟು ಆಗುವಂತೆ — ಇದನ್ನು ತಪ್ಪಿಸಿ ಈ ಅಗಾಧ ಹಣವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸುವುದೊಳ್ಳೆಯದೆಂಬ ಅಭಿಪ್ರಾಯಗಳು ಹೆಚ್ಚುತ್ತಿವೆ.

oo

ದಿವ್ಯವಾಣಿ

ಭಾರತವು ತನ್ನ ಏಳು ಲಕ್ಷ ಆಗೋಚರ, ಚಿಕ್ಕ ಮತ್ತು ದಾರಿಗೆ ದೂರವಿರುವ ಗ್ರಾಮಗಳಲ್ಲಿ ಜೀವಿಸುತ್ತಿದೆ ; ಅದು ನಿಜವಾದ ಭಾರತ, ನನ್ನ ಭಾರತ, ಅದಕ್ಕಾಗಿ ನಾನು ಜೀವಿಸುವುದು. — ಮಹಾತ್ಮಾ ಗಾಂಧಿ.

ಜೀವನವು ಒಂದು ನಗು, ಅದರಿಂದ ಜೀವಿಸುವುದು ಒಂದು ಸಾಧನ.— ಚಿಂಗ್ ಚೌ

ವುಡ್‌ಲ್ಯಾಂಡ್ಸ್ ಕೇಂದ್ರಿಯುತ 4 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪಂಕಜ್ ಮತ್ತಿಂ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನರಂಜನೆಯ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— 29–12–61 ರಿಂದ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

Help ' The Gorakshana '

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರಕ್ಕೆ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧ್ಯೇಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4



ದಕ್ಷಿಣ ಇಲಿನಾಯಿಸ್‌ನಲ್ಲಿರುವ ಬ್ಲಾಕಬರ್ನ್ ಕಾಲೇಜು ವಿದ್ಯಾರ್ಥಿಗಳೇ ಕಟ್ಟಡದಲ್ಲಿನ ಜೀವಶಾಸ್ತ್ರೀಯ ಪ್ರಯೋಗಶಾಲೆಯ ದೃಶ್ಯದ ಚಿತ್ರ.

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.